

ಹೊರುವವನೂ ಶೇಖರನೇ.

'ಆ ನಮನಿ ದುಣ್ಣ ದುಣ್ಣ ಮೋಡ ಕಟ್ಟಿದ್ದು ನೋಡಿದರೆ ಆಕಾಶಕ್ಕೆ ತೋಟೆ ಬಿದ್ದಂಗೆ ಮತ್ತೆ ಮಳೆ ಹೊಯ್ಯುದು ಗ್ಯಾರಂಟಿ' ಎನ್ನುತ್ತಾ ದಾಪುಗಾಲು ಹಾಕಿ ಗಣಪತಿ ವಿಸರ್ಜನೆಯ ದಂಡು ಹೊರಟಿತ್ತು.

ಬಾಳೆ ಹಣ್ಣಿಗೆ ಸಿಕ್ಕಿಸಿದ್ದ ಪೊತ್ತೆ ಊದಿನಕಡ್ಡಿಯೂ ನಂದಿಹೋಯ್ತು. ಗರ್ನಾಲು, ಮಡ್ಡ ಪಟಾಕಿಗಳೆಲ್ಲ ಹೊತ್ತದೆ ಟುಸುಗುಟ್ಟು ಸುಮ್ಮನಾದವು. ಈ ಸಲದ ಗಣಪತಿ ಮುಳುಗಿಸುವುದು ಮಾತ್ರ ಕಾಟಾಚಾರಕ್ಕೇಯಾ. ಶೇಖರನ ಮನೆಯಲ್ಲಿ ಪಟಾಕಿಯಿಲ್ಲದೆ ಗಣಪತಿ ಮುಳುಗಿಸುವುದು ಇದೇ ಮೊದಲಬಾರಿಗೆ ಇರಬೇಕು.

ಎರಡು ವರ್ಷದ ಹಿಂದಿನ ಚೌತಿ ಹಬ್ಬದ ದಿನದಲ್ಲಿ ಇಷ್ಟಲ್ಲದಿದ್ದರೂ ಸಣ್ಣ ಮಳೆಯಿತ್ತು. ಪಟಾಕಿಗೆ ಕಿಡಿ ತಾಗಿಸಿದ ಕೂಡಲೆ ನೆಲಕ್ಕೆ ಎಸೆದರೆ ಹೊಟ್ಟುವುದಿಲ್ಲ ಎಂದು ಪುರು, ಕೈಯಲ್ಲೆ ಹಿಡಿದು ಇನ್ನೇನು ಪಟಾಕಿ ಹೊಟ್ಟುತ್ತದೆ ಎನ್ನುವಾಗ ಎಸೆಯುತ್ತಿದ್ದ.

'ಮಸ್ಕರಿ ಮಾಡ್ಬೇಡಾ ಪುರು, ಪಟಾಕಿ ಜೊತೆ ಆಡ್ಬೇಡಾ. ಕೈ ಸುಟ್ಕೊಳ್ತಿ' ಎಂದು ಮಾಮಿ ಎಚ್ಚರಿಕೆ ಕೊಟ್ಟರೂ ಕಿವಿಗೆ ಹಾಕಿಕೊಳ್ಳಲಿಲ್ಲ. ಪರಾಮಷಿಯಾಗಿ ಒಂದು ಗರ್ನಾಲು ಎಸೆಯುವ ಮೊದಲೇ ಪುರುವಿನ ಕೈಯಲ್ಲೇ ಹೊಟ್ಟಿ, ಕೈ ಸುಟ್ಟೇ ಹೋಯ್ತು. ಗಣಪತಿ ಹೊತ್ತ ಶೇಖರ ಗಡಿಬಿಡಿಗೊಂಡು ತನ್ನ ಅಪ್ಪನಿಗೆ ಗಣಪತಿ ಹೊರಲು ಕೊಟ್ಟು ಗದ್ದೆ ಬಯಲಿಗೆ ದೌಡಾಯಿಸಿ ಒಂದು ಬೆಕ್ಕಿನ ಗಾತ್ರದ ಗೊಟರು ಕಪ್ಪೆಯನ್ನು ಹಿಡಿದು ತಂದು ಪುರುವಿನ ಕೈಗೆ ಪಟ್ಟಿಯಂತೆ ಇಟ್ಟು ಸಮಾಧಾನಪಡಿಸಿದ್ದ. ಕೈ ಶಾಖ ಹೀರಿಕೊಂಡ ಗೊಟರು ಕಪ್ಪೆ ಸ್ವಲ್ಪ ಹೊತ್ತಿಗೆ ಗೊಟಕ್ಕಾಯಿತು. ಅಲ್ಲಿಯವರೆಗೆ ಪುರು ಸ್ವಲ್ಪ ಚೇತರಿಸಿಕೊಂಡಿದ್ದ. ಆದಕ್ಕಾಗಿಯೇ ಈ ಸಲ ಪಟಾಕಿ ಹೊಟ್ಟದಿದ್ದರೂ ಇಲ್ಲ, ಆದರೆ ಇಲ್ಲದ ಭಾನಗಡಿ ಬೇಡ ಎಂದು ಬರೀ ಜಮಟೆ, ತಾಳದಲ್ಲೇ ಗಣಪತಿ ವಿಸರ್ಜನೆಯ ಮೆರವಣಿಗೆ ಹೊರಟಿತ್ತು.